**<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ದಿನಾಂಕ 08-02-2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>**

**<u>ಪಾಟೀಸವಾಲುಃ ಶ್ರೀ ಎ.ಆರ್.ಎಮ್.ಐ. ರವರು ಅರ್ಜಿದಾರರ ಪ್ರತಿನಿಧಿಯವರಿಂದಃ</u>**

**4.** ನಾನು ಈ ಪ್ರಕರಣದಲ್ಲಿ ವಿಚಾರಣಾಧಿಕಾರಿಯಾಗಿರಲಿಲ್ಲ. ನಮ್ಮ ಸಂಸ್ಥೆಯಲ್ಲಿ ಯಾರನ್ನಾದರು ಕೆಲಸಕ್ಕೆ ಸೇರಿಸಿಕೊಳ್ಳಬೇಕಾದರೆ ಅವರು ಕೆಲಸಕ್ಕೆ ನೇಮಕಾತಿ ಹೊಂದಿದ ನಂತರ ಆಯಾ ಹುದ್ದೆಗೆ ಸೇರಲು ಬಂದಾಗ ಅವರ ದಾಖಲೆಗಳನ್ನು ಪಡೆದುಕೊಂಡು ಪರಿಶೀಲನೆಗಾಗಿ ಬೋರ್ಡ್ ಗೆ ಕಳುಹಿಸುತ್ತೇವೆ. ಎದುರುದಾರರ ಸಂಸ್ಥೆಯಲ್ಲಿ ಅಭ್ಯರ್ಥಿಗಳ ನೇಮಕಾತಿ ಮಾಡುವ ಅಧಿಕಾರ ಅದರ ಮ್ಯಾನೇಜಿಂಗ್ ಡೈರಕ್ಟರ್ ರವರಿಗೆ ಇರುತ್ತದೆ. ನಮ್ಮ ಸಂಸ್ಥೆಯ ನಿಯಮಗಳ ಪ್ರಕಾರ ಎರಡು ವರ್ಷಗಳು ತರಭೇತಿ ಇರುತ್ತದೆ. ದಾಖಲೆಗಳನ್ನು ಪರಿಶೀಲನೆ ಮಾಡಿ ವರದಿಯನ್ನು ಕಳುಹಿಸಲು ಯಾವುದೇ ಸಮಯವನ್ನು ನಿಗಧಿ ಮಾಡಿರುವುದಿಲ್ಲ, ಆದರೆ ದಾಖಲೆಗಳ ಪರಿಶೀಲನೆ ನಂತರ ಬೋರ್ಡ್ ನವರು ನೀಡುವ ವರದಿಯ ಆಧಾರದ ಮೇಲೆ ಅಭ್ಯರ್ಥಿಯ ಪ್ರೊಬೇಷನರಿ ಅವಧಿಯನ್ನು ಪರಿಗಣಿಸಲಾಗುತ್ತದೆ.

**5.** ನಮ್ಮ ಸಂಸ್ಥೆಗೆ ಬಸವನಬಾಗೆವಾಡಿಯ ನಂದೀಶ್ವರ ಐ.ಟಿ.ಐ. ಕಾಲೇಜಿನಿಂದ ಅರ್ಜಿದಾರ ಚಾಯಮಣಿರವರು ತಮ್ಮ ವಿದ್ಯಾಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿರುವುದಿಲ್ಲ ಎಂದು ಯಾವುದೇ ಪತ್ರ ಬಂದಿರುವುದಿಲ್ಲ. ಸಂಸ್ಥೆಯವರು ಅರ್ಜಿದಾರ ವಿರುದ್ಧ ಯಾವುದೇ ಇಲಾಖಾ ವಿಚಾರಣೆಯನ್ನು ನಡೆಸಿರುವುದಿಲ್ಲ ಕಾರಣ ಅವರು ತರಭೇತಿಯ ಅವಧಿಯಲ್ಲಿದ್ದರು.

ತರಭೇತಿಯ ಅವಧಿಯನ್ನು ಎರಡು ವರ್ಷಗಳಿಗಿಂತಲೂ ಹೆಚ್ಚಾಗಿ ಮುಂದೂಡಲು ಸಿ ಮತ್ತು ಆರ್ ನಿಯಮಗಳ ಅನುಸಾರವಾಗಿ ಅವಕಾಶವಿರುತ್ತದೆ.

**6.** ನಮ್ಮ ಸಂಸ್ಥೆಯವರು ಅರ್ಜಿದಾರರು ಐ.ಟಿ.ಐ. ವಿದ್ಯಾರ್ಹತೆ ಹೊಂದಿದ್ದಾರೆಂದು ನೀಡಿದ್ದ ಸುಳ್ಳು ಪ್ರಮಾಣ ಪತ್ರದ ಆಧಾರದ ಮೇಲೆ ಸಂಬಂಧಪಟ್ಟ ವಿದ್ಯಾಸಂಸ್ಥೆಯ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿರುವುದಿಲ್ಲ, ಆದರೆ ಅರ್ಜಿದಾರರನ್ನು ಕೆಲಸದಿಂದ ತೆಗೆದು ಹಾಕಿರುತ್ತೇವೆ. ನಾವು ಅರ್ಜಿದಾರರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ನಡೆಸದೆ ಆಕೆಯನ್ನು ವಿನಾಃ ಕಾರಣ ಕೆಲಸದಿಂದ ತೆಗೆದು ಹಾಕಿರುತ್ತೇವೆ ಎಂದರೆ ಸರಿಯಲ್ಲ. ಅರ್ಜಿದಾರರು ತಮ್ಮ ವಿದ್ಯಾರ್ಹತೆಯ ಅಂಕಪಟ್ಟಿಯನ್ನು ನೀಡಿ ಶುಲ್ಕ ಕಟ್ಟಿದ್ದರೂ ಸಹ ಉದ್ದೇಶಪೂರ್ವಕವಾಗಿ ಅವರನ್ನು ಕೆಲಸದಿಂದ ತೆಗೆದು ಹಾಕಿರುತ್ತೇವೆ ಎಂದರೆ ಸರಿಯಲ್ಲ.

**ಮರು-ವಿಚಾರಣೆಃ ಅರ್ಜಿದಾರರ ಪರವಾಗಿ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**